IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಆಧುನಿಕ ರಂಗಭೂಮಿ ಮತ್ತು ಜನಪದ ರಂಗಭೂಮಿ

೧.ಬಾಲರಾಜು ಬಿ ವಿ
ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ್ ಅಕಾಡಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್
ಹುಲ್ಲಹಳ್ಳಿ, ಕೊಪ್ಪ- ಬೇಗೂರ್ ರೋಡ್ , ಸಕಲವಾರ ಪೋಸ್ಟ್ ಬೆಂಗಳೂರು-೮೩

೨.ಡಾ. ಹೇಮಲತ ಬಿ.ಎಸ್
ಸಹ ಪ್ರಾಧ್ಯಾಪಕರು
ಜೈನ್ ಡೀಮ್ಡ್ -ಟು- ಬಿ ವಿಶ್ವವಿದ್ಯಾಲಯ
ಸಿ ಎಮ-ಎಸ್ ಬಿಲ್ಡಿಂಗ್ ಲಾಲ್ ಬಾಗ್ ರೋಡ್ ಬೆಂಗಳೂರು

ಕರ್ನಾಟಕದ ಹಳ್ಳಿಗಾಡಿನಲ್ಲಿ ಇರುವ ಬಯಲಾಟಗಳನ್ನು ಜನಪದ ರಂಗಭೂಮಿ ಎಂದು, ಕಳೆದ ಏಳೆಂಟು ದಶಕಗಳಲ್ಲಿ ರೂಪುಗೊಂಡು ಬೆಳೆದು ಬಂದಿರುವ ಹೊಸ ಬಗೆಯ ರಂಗಭೂಮಿಯನ್ನು 'ಆಧುನಿಕ' ಎಂದು ವ್ಯವಹರಿಸುವುದುಂಟು. ಈ ಪ್ರಕಾರ ಜನಪದ ಎಂಬುದು ಹಳೆಯದೂ, ಸ್ಥಗಿತಗೊಂಡದ್ದೂ, ವಿನಾಶದ ಹಾದಿ ಹಿಡಿದಿರುವುದು ಆಗಿದ್ದರೆ, ಆಧುನಿಕ ರಂಗಭೂಮಿ ಚಲನಶೀಲವೂ ಆಗಿದೆ. ಆಧುನಿಕ ಎಂಬುದಕ್ಕೆ ಶಿಷ್ಟ. ನಾಗರೀಕ ಎಂಬ ವಿಶೇಷಣಗಳೂ ಬಳಕೆಯಾಗುತ್ತವೆ. ಆದರೆ ಈ ವಿಭಜನೆ ಅಷ್ಟು ಸರಳವಾದುದಲ್ಲ. ಆಧುನಿಕ ಎಂದರೆ, ಈಗ ನಮ್ಮ ಜೊತೆ ಇರುವುದೆಲ್ಲವೂ ಆಗಬಹುದು. ಹಾಗಿದ್ದರೆ ಜನಪದ ರಂಗಭೂಮಿಯೂ ಆಧುನಿಕವೇ ಆಗಿದೆ. ಇದು ಕೇವಲ ತರ್ಕವಲ್ಲ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಖಚಿತವಾದ ಎನ್ನಲಾದ ಜನಪದ ಅವಾಸ್ತವವು ಆಗಿರುವುದು ಸಾಧ್ಯವಿದೆ. ಈ ಎರಡು ರಂಗಭೂಮಿಗಳಲ್ಲದೆ ಜನಪ್ರಿಯ ರಂಗಭೂಮಿ ಮಾತೆಂಬ ಮತ್ತೊಂದು ಬಗೆಯನ್ನು ಕಾಣಲು ಯತ್ನಿಸಲಾಗಿದೆ. ಇದು ಕೂಡ ವಾಸ್ತವವಲ್ಲ. ಏಕೆಂದರೆ ಜಾನಪದ ಈಗಲೂ ಸೃಜನಶೀಲ ಮತ್ತು ಚಲನಶೀಲವೆಂದು ವಾದಿಸುವುದಾದರೆ, ಅದು ಈಗ ಯಾವ ಆಕಾರವನ್ನು ತಡೆಯುತ್ತಿದೆ ಎಂಬುದನ್ನು ಗುರುತಿಸಲು ಯತ್ನಿಸಬೇಕು. ಅಥವಾ ಆಧುನಿಕವೆಂಬ ನಾವು ಹೇಳುತ್ತಿರುವ ರಂಗಭೂಮಿಯೂ ಜನಪದ ರಂಗಭೂಮಿಯೊಡನೆ ಸಂಬಂಧಗಳನ್ನ ಪಡೆದಿರುವುದನ್ನ ಕಾಣಬೇಕು.

**ಅ. ಜನಪದ ರಂಗಭೂಮಿಯನ್ನು ಕುರಿತು ಎರಡು ಮುಖ್ಯ ನಿಲುವುಗಳು ಹೀಗಿವೆ.**

೧. ಜನಪದ ರಂಗಭೂಮಿ ಎಂದರೆ ಬಯಲಾಟ. ಮುಖ್ಯವಾಗಿ ಆರಾಧನೆಯ ಆಚರಣೆಯಲ್ಲಿ ಹುಟ್ಟಿರುವಂಥದ್ದು. *(ಚಂದ್ರಶೇಖರ ಕಂಬಾರ 1973, ಪುಟ 8)* ಕಂಬಾರರು ಈ ನಿಲುವನ್ನು ಗಾಢವಾಗಿ ಸಮರ್ಥಿಸುವವರು. ಇಡೀ ಜನಪದ ರಂಗನಾಥ ಒಂದು ಭಕ್ತ ಪ್ರೇಕ್ಷಕರ ಎದುರು ನಡೆಯುವ ಆರಾಧನೆ ಎಂಬುದನ್ನು ಅವರು ಸೂಚಿಸುತ್ತಾರೆ.

೨. ಈಗ ನಮ್ಮ ಜೊತೆಗೆ ಇರುವ ಜನಪದ ರಂಗಭೂಮಿ ಭಕ್ತಿಯುಗದ ಚಳುವಳಿಯಿಂದ ರೂಪಗೊಂಡಿದ್ದು. ಪುನರುಜ್ಜೀವನಗೊಂಡಿತು. ಮೂಲದಲ್ಲಿ ಜನಪದ ರಂಗಭೂಮಿಗೂ ಆರಾಧನೆಗೂ ಸಂಬಂಧವಿರಲಿಲ್ಲವೆಂದು ಆಧ್ಯ

ರಂಗಾಚಾರ್ಯರು ಸೂಚಿಸುತ್ತಾರೆ· ಭರತನಲ್ಲಿ ಸೂಚಿತವಾಗುವ ಉಪರೂಪಗಳೇ ಮೊದಲು ಜನಪದ ರಂಗ ಕೃತಿಗಳಾಗಿದ್ದಲ್ಲಿ ಅವುಗಳು ಪ್ರಾಸಂಗಿಕವಾದ, ಸಾಮಾಜಿಕ ಅಹ್ಲಾದವೆ ಗುರಿಯಾಗಿದ್ದ ದೃಶ್ಯ ಪ್ರಕಾರಗಳಾಗಿರಬೇಕ□·

ಈ ಎರಡು ನಿಲುವುಗಳಲ್ಲಿ ಸರಿಯಾವುದೆಂಬುದು ನಮಗೆ ಮುಖ್ಯವಲ್ಲ· ಈಗ ಜನಪದ ರಂಗನಾಟಕ ಒಂದು ಆರಾಧನೆಯಾಗಿದೆಯೋ ಎಂಬುದು ಮಾತ್ರ ನಮ್ಮ ಚರ್ಚೆಗೆ ಬೇಕಾದದ್ದಾಗಿದೆ· ಅದೊಂದು ಸಾಮುದಾಯಿಕ ಚಟುವಟಿಕೆ ಎಂಬುದನ್ನು ಮಾತ್ರ ಒಪ್ಪಬಹುದೇ ಹೊರತು, ಆರಾಧನೆಗೆ ಅವಶ್ಯವಾದ ಭಾಗಿಯಾಗುವಿಕೆ ಮತ್ತು ತನ್ಮಯತೆಗಳು ನೋಟಕರಲ್ಲಿ ಇರುವುದೆಂದು ಒಪ್ಪುವುದು ಸಾಧ್ಯವಿಲ್ಲ·

ಇದಲ್ಲದೆ ಜನಪದ ನಾಟಕಗಳು ಲಿಖಿತ ರೂಪವನ್ನು ಪಡೆದಿರುವುದಿಲ್ಲ· ಪ್ರಯೋಗವೇ ಅದರ ನಿಜವಾದ ಅಸ್ತಿತ್ವ ಸೂತ್ರಧಾರ, ಮೇಳ ಇವು ಬಯಲಾಟದ ಅನಿವಾರ್ಯ ಪಾತ್ರಗಳು· ರಂಗ ಸಜ್ಜಿಕೆ, ಪರಿಕರ, ಭಾಷೆ ,ನಟನೆ ಎಲ್ಲವೂ ಶೈಲಿಕೃತ ಮತ್ತು ಈ ನಾಟಕಗಳು ಹಾಡು - ಮಾತು ಕುಣಿತಗಳಿಂದ ಕೂಡಿದ್ದು ಆದಿಮ ಕಲಾಪ್ರಕಾರದ ಸಂಪೂರ್ಣತೆಯನ್ನು ಹೊಂದಿರುತ್ತದೆ·

***ಆ· ಆಧುನಿಕ ರಂಗ ಭೂಮಿಯ ಲಕ್ಷಣಗಳನ್ನು ಸುಬ್ಬಣ್ಣ ಕಿವಿಯವರು ಹೀಗೆ ಸಂಗ್ರಹಿಸಿದ್ದಾರೆ·***

೧· ಪ್ರೇಕ್ಷಾಗೃಹಕ್ಕೆ ಮೂರು ಗೋಡೆಗಳಿದ್ದು, ಪ್ರೇಕ್ಷಕ ವರ್ಗವೇ ನಾಲ್ಕನೆಯ ಗೋಡೆ, ಎಂದರೆ ಯುರೋಪಿನ ಪ್ರೋಸೀನಿಯಂ ರಂಗಭೂಮಿಯ ಲಕ್ಷಣಗಳು ಇಲ್ಲಿ ಕಾಣತೊಡಗುತ್ತವೆ·

೨· ನಾಟಕಗಳಲ್ಲಿ ವಾಸ್ತವಿಕತೆ ಕಡೆಗೆ ಹೆಚ್ಚು ಒಲವು ಕಾಣತೊಡಗುತ್ತದೆ· ಇದು ವಸ್ತು, ವಸ್ತುವಿನ್ಯಾಸ, ನಟನೆ, ಅಭಿನಯ, ರಂಗ ಸಜ್ಜಿಕೆ, ಭಾಷೆ ಈ ಎಲ್ಲಾ ಪರಿಕರಗಳಿಗೂ ಅನ್ವಯಿಸುತ್ತದೆ·

೩· ನಾಟಕದ ಪ್ರಯೋಗಗಳ ಪ್ರಕಾರ ಲಿಖಿತ ನಾಟಕಗಳಿಂದ ಪೂರ್ವ ನಿರ್ಧಾರಿತವಾಗುತ್ತದೆ· ಎಂದರೆ ನಾಟಕದ ಲಿಖಿತರೂಪ ಸಂವೃತ್ತಗೊಳ್ಳುತ್ತ ಬಂದು ತನ್ನ ದೃಶ್ಯರೂಪದ ಸಾಧ್ಯತೆಯನ್ನು ಮೊಟಕುಗೊಳಿಸುತ್ತಾ ಹೋಗುತ್ತದೆ·

ಮೇಲು ನೋಟಕ್ಕೆ ಈ ಲಕ್ಷಣಗಳನ್ನು ಒಪ್ಪುವುದು ಸರಿ ಎನಿಸಿದರೂ, ವಿವರಗಳಲ್ಲಿ ಗಮನಿಸಬೇಕಾದ ಬೇರೊಂದು ಚಿತ್ರವೇ ನಮಗೆ ಕಾಣುವ ಸಾಧ್ಯತೆ ಇದೆ·

ಕನ್ನಡ ನವೋದಯ ಕವಿಗಳು, ನಾಟಕಕಾರರು ರಚಿಸಿದ ನಾಟಕಗಳು ಮೇಲಿನ ಲಕ್ಷಣ ನಿರ್ವಚನದ ಹಿನ್ನೆಲೆಯಲ್ಲಿವೆ ಎಂದು ತಿಳಿಯಬಹುದು· ಈ ನಾಟಕಗಳು ಅಪೇಕ್ಷಿಸುತ್ತಿದ್ದ ರಂಗಭೂಮಿ ಕೇವಲ ಲಿಖಿತ ನಾಟಕಗಳನ್ನ ದೃಶ್ಯರೂಪಕ್ಕೆ ತರುವ ಮಾಧ್ಯಮ ಮಾತ್ರ· ಪ್ರಯೋಗಗಳ ನೆರವಿಲ್ಲದೆಯೂ ಸಾಹಿತ್ಯಕವಾಗಿ ಈ ಲಿಕಿತ ನಾಟಕಗಳನ್ನ ಕೃತಿಗಳನ್ನಾಗಿ ಚಲಿಸುವುದು ಸಾಧ್ಯ ಮತ್ತು ನಾಟಕಗಳ ಪ್ರಯೋಗಗಳು ನಾಟಕಕಾರರನ್ನು ಮೀರಬಲ್ಲವು· ಹೊಸ ನೆಲೆಗಳಿಗೆ ತಲುಪ ಬಲ್ಲವೂ ಎಂಬುದನ್ನೂ ನವೋದಯದಲ್ಲಿ ಒಪ್ಪಿದಂತೆ ತೋರುವುದಿಲ್ಲ· ಜನಪದ ನಾಟಕ ಪ್ರಯೋಗಗಳ ದೃಷ್ಟಿಯಿಂದ ಇದೊಂದು ಬಲವಾದ ಸ್ಥಿತಿಯೇ ಸರಿ ಕೆಲವು ನಾಟಕಕಾರರು ಪಾರಂಪರಿಕ ರಂಗಭೂಮಿಯ ಅನುಭವಗಳಿಂದ ಭಿನ್ನವಾದ ಯುರೋಪಿನ ರಂಗದ ನೇರವಾದ ಪರಿಚಯದಿಂದ ನಾಟಕಗಳನ್ನು ರಚಿಸಿದ್ದಾರೆ□ಬುದು ನಿಜ· ಕೈಲಾಸಂ ಮತ್ತು ಶ್ರೀರಂಗ ಇವರೇ ಅದಕ್ಕೆ ಉದಾಹರಣೆಯಾಗಬಲ್ಲರು· ಆದರೆ ನವೋದಯದ ನಾಟಕಕಾರರು ತಮ್ಮ ಸಾಹಿತ್ಯಕ- ನಾಟಕಗಳ ಬಂಧಗಳಿಗೆ ಜನಪದ ರಂಗಭೂಮಿಯ ಅನುಭವಗಳಲ್ಲಿ ಹುಡುಕಾಟ ನಡೆಸಿರುವುದುಸ್ಪಷ್ಟವಾಘಿದೆ· ಕಳೆದ ಶತಮಾನದಲ್ಲೇ ಶಾಕುಂತಲ ನಾಟಕವನ್ನು ಕನ್ನಡಿಸಿದ ಚುರುಮುರಿಯವರು, ಬೇಟರಾಯ ದೀಕ್ಷಿತರು ತಮಗೆ ಪರಿಚಯವಿದ್ದ ಜನಪದ ರಂಗಭೂಮಿಯ ಲಕ್ಷಣಗಳನ್ನೂ ಬಳಸಿಕೊಂಡಿದ್ದಾರೆ· ಅಥವಾ ಜನಪದ ರಂಗಭೂಮಿಯಲ್ಲಿ ಹೊಸದೊಂದು ಆಕೃತಿಯನ್ನು ಕಟ್ಟಲು ಯೋಜಿಸಿದ್ದಾರೆ, ಶಾಂತ ಕವಿಗಳು ಆಗ ಆಡಿಸುತ್ತಿದ್ದ ನಾಟಕಗಳು ಇದೇ ಲಕ್ಷಣಗಳು ಹೊಂದಿದ್ದವೆಂದು ಕೆ·ಡಿ ಕುರ್ತಕೋಟಿಯವರು ಹೇಳುತ್ತಾರೆ·

**ಚಾರಿತ್ರಿಕ ಬೆಳವಣಿಗೆ:**

ಆಧುನಿಕ ರಂಗಭೂಮಿಯ ವಿವಿಧ ಮಜಲುಗಳಲ್ಲಿ ವೃತ್ತಿರಂಗಭೂಮಿಗೆ ಇರುವ ಅಂತಸ್ಸಂಬಂಧಗಳನ್ನು ನಾವೀಗ ಗಮನಿಸಬೇಕಾಗಿದೆ· ಆಧುನಿಕ ರಂಗಭೂಮಿಯಲ್ಲಿ “ವೃತ್ತಿ’ ಮತ್ತು 'ಹವ್ಯಾಸಿ' ಎಂಬ ಬೆಳವಣಿಗೆಯಾಗಿ 'ಅರೆ- ವೃತ್ತಿ' ಮತ್ತು ಜನಪದ ರಂಗಭೂಮಿಗಳೂ ರೂಪುಗೊಂಡಿವೆ· ಇವೆಲ್ಲವೂ ಪ್ರತ್ಯೇಕವಾಗಿ ಚರ್ಚಿಸವ ಅಗತ್ಯವಿದೆ·

**ಅ· ವೃತ್ತಿ ರಂಗಭೂಮಿ-** ಜನಪದ ರಂಗಭೂಮಿಯೂ ವೃತ್ತಿರಂಗಭೂಮಿಯೇ ಆಗಿದೆ, ಅಲ್ಲಯೂ ಹವ್ಯಾಸಗಳಿದ್ದಾರೆ· ಮೇಳಗಳು ಅಲೆಮಾರಿಗಳಾಗಿ ಊರಿಂದ ಊರಿಗೆ ತಿರುಗಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದುದು ಆಧುನಿಕ ವೃತ್ತಿರಂಗಭೂಮಿಯಲ್ಲೂ ಮುಂದುವರಿದಿದೆ· ಊಳಿಗ ಮಾನ್ಯ ವ್ಯವಸ್ಥೆಯಲ್ಲಿ ಇದು ರೂಪುಗೊಂಡದ್ದು, ಆದರೂ ನವೋದಯದ ಸ್ವರೂಪದಲ್ಲೇ ಕಂಡು ಬರುವ ಪ್ರಜಾಪ್ರಭುತ್ವೀಕರಣ ಇಲ್ಲಿಯೂ ಕಾಣುತ್ತದೆ· ವೃತ್ತಿರಂಗಭೂಮಿಗೆ ಮೇಲೆ ಹೇಳಿದ ಆಧುನಿಕ ರಂಗಭೂಮಿಯ ಲಕ್ಷಣಗಳನ್ನು ಪೂರ್ಣವಾಗಿ ಅನ್ವಯಿಸುವುದು ಸಾಧ್ಯವಾಗುವುದಿಲ್ಲ·

೧· ವೃತ್ತಿರಂಗದ ನಾಟಕಗಳು ಪ್ರಯೋಗಗಳ ಆಕಾರವನ್ನೂ ನಿರ್ಧರಿಸುತ್ತವೆ ಎನ್ನಲಾಗದು· ಆ ನಾಟಕಗಳು ಸಡಿಲಬಂಧವನ್ನೇ ಹೊಂದಿದ್ದು, ಎಷ್ಟೋ ಕಡೆಗಳಲ್ಲಿ ತೆರವುಗಳನ್ನೂ ಹೊಂದಿರುತ್ತವೆ· ಜನಪದ ನಾಟಕದಲ್ಲಿದಂತೆ ಹಾಡುಗಳಷ್ಟೇ ಖಚಿತ· ಎಷ್ಟೋ ಪ್ರಸಂಗಗಳು, ಪ್ರಯೋಗಗಳು ನಡೆಯುತ್ತಿರುವ ಪ್ರದೇಶವನ್ನು ಅವಲಂಭಿಸಿ ನಟರಲ್ಲೇ ರೂಪುಗೊಳ್ಳುವುದೂ ಉಂಟು· ಹಾಸ್ಯಕ್ಕೆ ಸಂಬಂಧಿಸಿದ್ದನ್ನು ಇಲ್ಲಿ ನಿದರ್ಶನವೆಂದು ಹೇಳಬಹುದು· ಗುಂಪಿನ ನಟರ ಸಾಧ್ಯತೆಯನ್ನು ಅವಲಂಬಿಸಿ ನಾಟಕಗಳು ರಚನೆಯಾಗಿವೆ· ಹಾಡುವವರು ನಟರೇ ಆಗಿದ್ದು, ಮೇಳದವರು ಇಲ್ಲವೇ ಸಂಗೀತವಾದ್ಯಗಳವರು ಪ್ರೇಕ್ಷಕರಿಗೆ ಬೆನ್ನು ತಿರುಗಿಸಿ ಕುಳಿತದ್ದು ಜನಪದ ನಾಟಕಗಳಿಗಿಂತ ಭಿನ್ನವೆನಿಸಲು ಕಾರಣವಿದ್ದೀತು· ನಾಟಕ ಪ್ರಯೋಗ ನಿರ್ಮಾತೃ ಜನಪದ ರಂಗಭೂಮಿಯಲ್ಲಿ ರಂಗದಲ್ಲೇ ಸೂತ್ರಧಾರನಾಗಿ ಭಾಗವತನಾಗಿ ಹಾಜರಿರುತ್ತಾನೆ· ವೃತ್ತಿರಂಗಭೂಮಿಯಲ್ಲಿ ಆತ ಹೊರಗೆನಿಂತ· ಇದು ಅಭಿಜಾತರಂಗದ ಲಿಖಿತನಾಟಕಗಳ ಪರಿಚಯದಿಂದ ಆದ ಬದಲಾವಣೆ ಇದ್ದೀತು· ನಟನೇ ಹಾಡಿಗಾರನಾಗಿದ್ದೂ ಇದೇ ಕಾರಣದಿಂದ ಎನ್ನಬಹುದೇ?· ಅಥವಾ ಹೀಗೆ ಹೇಳಬಹುದೇ? ಆದಿಮ ಕಲೆಯಲ್ಲಿ ಹಾಡು -ಕುಣಿತ- ಮಾತು ಇವು ಮೂರು ಜತೆಗಿದ್ದು, ಅಭಿನಯಿಸುವವರು ಮತ್ತು ನೋಡುವವರು ಎಂಬ ವಿಭಜನೆ ಇರಲಿಲ್ಲವಷ್ಟೇ·ನಿಧಾನವಾಗಿ ಪ್ರೇಕ್ಷಕ ವರ್ಗ ರೂಪುಗೊಂಡಿತು· ಹಾಡು ಮೇಳದವರದಾಯಿತು·ಮಾತು ಕುಣಿತಗಳೊಡನೆ ನಟ ಹೊರಗೆ ಬಂದನು· ಮುಂದುವರಿದ ಹಂತದಲ್ಲಿ ನಟನೇ ಹಾಡು, ಮಾತು ಅಭಿನಯಗಳಿಗೆ ಕೇಂದ್ರವಾದನು· ಇದೊಂದು ಬೆಳವಣಿಗೆ ಎನ್ನಬೇಕಲ್ಲವೇ·?

೨·ಸಂಗೀತಗಾರರು ಮುಂದೆ ಬಂದದ್ದು ರಂಗಸ್ಥಳದಲ್ಲಿ ಆದ ಪರಿವರ್ತನೆಯಿಂದಾಗಿ· ಪರದೆಗಳು ರಂಗಪರಿಕರಗಳು ಬಯಲಾಟದ ರಂಗಕ್ಕೆ ಬಂದ□ ವಾದ್ಯಗಾರರು ಮುಂದೆ ಬಂದರು· ಪರದೆಗಳು ಬಂದದ್ದು ಕೂಡ ನಮ್ಮ ರಂಗಭೂಮಿಯ ದೃಷ್ಟಿಯಿಂದ ಗಮನಾರ್ಹ· ಪಾತ್ರಗಳು ತೆರೆದ ಬಯಲಿನಲ್ಲಿ ಕತ್ತಲಿನ ಹಿನ್ನೆಲೆಯಲ್ಲಿ ಆಕಾರ ತಳೆಯುತ್ತಿದ್ದ ಬಯಲಾಟದಲ್ಲಿ, ಪಾತ್ರಗಳ ಪರಿಸರ ಒಂದೋ ನೋಡುವವನಿಗೆ ಮುಖ್ಯವಾಗಿರಲಿಲ್ಲ·ಇಲ್ಲವೆ ನಟನ ಮಾತು ಅಭಿನಯಗಳು ಅದನ್ನು ನಿರ್ಮಿಸುತಿತ್ತು·

3· ಪ್ರಯೋಗದ ಅಂಗವಾಗಿದ್ದ ಸಂಗೀತ ನಟನ ಜವಾಬ್ದಾರಿಯಾಗಿ ಕುಣಿತಕ್ಕೆ ಈಗ ಅವಕಾಶವಿಲ್ಲವಾಯಿತು, ಅಥವಾ ಅವಕಾಶ ಕಡಿಮೆಯಾಯಿತು ವೃತ್ತಿ ರಂಗಭೂಮಿಯ ಗೀತೆಗಳ ಲಯಗಳು ಎಷ್ಟೋ ವೇಳೆ ಜನಪದ ಬಯಲಾಟಗಳ ಮಟ್ಟುಗಳೇ ಆಗಿದ್ದುದು ಗಮನಾರ್ಹ·ಅದಕ್ಕಿಂತ ಮುಖ್ಯವಾದ ವಷಯವೆಂದರೆ ಈಗ ಹಾಡು ನಿರ್ವಹಿಸುತ್ತಿದ್ದ ಕೆಲಸ- ಬಯಲಾಟದ ಹಾಡುಗಳು ಕಥಾನಾಯಕವೊಂದರ ಭಾಗಗಳೇ ಆಗಿದ್ದು ಪಾತ್ರಗಳು ತಮ್ಮ ಬಗ್ಗೆಯೇ ಉತ್ತಮ ಪುರುಷದಲ್ಲಿ ವಿವರ ನೀಡುವುದು ಸಾಮಾನ್ಯ· ಹಾಡು ವಾಖ್ಯೆಯೂ ಆಗಿರುತ್ತಿತ್ತು· ವೃತ್ತಿರಂಗಭೂಮಿಯಲ್ಲಿ ಆಡು ಭಾವಸಮುಚ್ಚಾಯವನ್ನ ಅಭಿವಾಚಿಸಲು ಬಳಕೆಯಾಗುತ್ತದೆ· ತೀವ್ರತೆ ಎಲ್ಲ ಸಂದರ್ಭದಲ್ಲೂ ಹಾಡೂ ರೂಪುತಾಳುತ್ತದೆ· ಮತ್ತೆ ನಟನ ಸಂಭಾಷಣೆಯಲ್ಲಿ ಅದು ಗದ್ಯರೂಪವನ್ನ ತಾಳುವುದು· ಇದು ಖಂಡಿತವಾಗಿ ಅಭಿಜಾತ ರಂಗದ ಲಕ್ಷಣವಲ್ಲ ಜನಪದ ರಂಗದ ಪ್ರಭಾವವೇ ಸರಿ·

4· ಪ್ರಯೋಗಗಳು ವೃತ್ತಿ ರಂಗಭೂಮಿಯಲ್ಲಿ ತೀರ ಇಕ್ಕಟ್ಟಾದ ಚೌಕಟ್ಟನ್ನು ಅವಲಂಬಿಸಿವುದಿಲ್ಲ· ನಟರು ಪ್ರಯೋಗವನ್ನು ಅಲ್ಲಿಯೇ ಮೂಲ ದ್ರವ್ಯಗಳಿಂದ ನಿರ್ಮಿಸುತ್ತಾರೆ ಮತ್ತು ನಿರ್ಮಿತಿಯೂ ಕೂಡ ಲೋಕಾಭಿರಾಮವಾಗಿ ನಡೆಯುತ್ತದೆ· ಇಲ್ಲಿಯೂ ಜನಪದ ರಂಗಭೂಮಿಯ ಲಕ್ಷಣಗಳೇ ಮುಂದುವರೆಯುವುದನ್ನ ಕಾಣುತ್ತೇವೆ· ನಟನೆ ಎಂಬುದು ಜನಪದ ರಂಗದಲ್ಲಿ ವಿಸ್ತೃತವಾದ ಆಂಗಿಕ ಚಲನೆಗಳು ಮಾತ್ರ· ಕತ್ತಲಿನ ತೆರೆದ ಬಯಲಿನ ಹಿನ್ನೆಲೆಗೆ ಈ ಚಲನೆಗಳು ಅತ್ಯವಶ್ಯವೇ ಸರಿ· ನಟ ಪಾತ್ರದ ಭಾವದೊಡನೆ ತನ್ಮಯನಾಗುವುದು ಒಂದು ಆರೋಪಿತಸ್ಥಿತಿ· ಹಾಗೆಂದುಕೊಂಡು ಆತನ ನಟನೆಯೇ ಬೇರೊಂದು ರೀತಿಯಲ್ಲಿ ತಾಳಬೇಕಲ್ಲ· ವೃತ್ತಿರಂಗ

ಭೂಮಿಯಲ್ಲಿ ನಟ ತನ್ನ ನಿಕಟ ಪರಿಸರವನ್ನ ತಿಳಿಸುವ, ಪ್ರೇಕ್ಷಕರನ್ನ ಸಿದ್ಧಪಡಿಸುವ ಜವಾಬ್ದಾರಿಯನ್ನು ಪಡೆದದ್ದರಿಂದ ಆತನ ವಾಚಿಕಾಭಿನಯ ಹೆಚ್ಚು ಸ್ಫುಟಗೊಳ್ಳುತ್ತಾ ಹೋಗುತ್ತದೆ. ಹಿಗಿದ್ದರೂ ಇದು ಪೂರ್ಣ ಪ್ರಮಾಣದ ಪರಿವರ್ತನೆಯಲ್ಲ.ಇಲ್ಲಿ ನಟರಿಗೆ ಮಾದರಿಗಳು ಇನ್ನೂ ಜನಪದ ರಂಗದವೇ ಆಗಿರುವುದನ್ನು ಕಾಣುತ್ತೇವೆ. ಹಾಡುವಾಗಿನ ಅಭಿನಯ, ಕುಣಿತವನ್ನೂ ಬಿಟ್ಟ ಭಂಗಿಗಳು ಬಯಲಾಟದವೇ ಆಗಿರುತ್ತವೆ. ಈ ಮಾತಿಗೆ ವಿನಾಯಿತಿ ಎನಿಸುವ ನಟರು ಇರಲಿಲ್ಲವೆಂದಲ್ಲ. ಆದರೆ ಅವರು ವೃತ್ತಿರಂಗಭೂಮಿಯ ಪ್ರಬಲ ನಟನ ವಿಧಾನವನ್ನು ಪ್ರತಿನಿಧಿಸುವುದಿಲ್ಲ. ಈ ನಟರು ಅಂಗಿಕಾಭಿನಯದಲ್ಲಿ ಬಳಸುವ ಶೈಲಿಕೃತ ವಿಧಾನಗಳು ಜನಪದ ರಂಗದಿಂದಲೇ ಬಂದವು.

ಕರ್ನಾಟಕದ ವೃತ್ತಿರಂಗಭೂಮಿಯು ಜನಪದ ರಂಗಭೂಮಿಯ ಒಂದು ಹೊಸ ರೂಪವೆಂದು ಮೇಲಿನ ವಾದದಲ್ಲಿ ಸ್ಪಷ್ಟಗೊಳಿಸಲು ಯತ್ನಿಸಿದ್ದೇನೆ. ಇದು ಕೇವಲ ಅನಿವಾರ್ಯವೂ ಹೌದು, ವೃತ್ತಿ ರಂಗಭೂಮಿಗೆ ನಾಟಕವನ್ನು ಬರೆದವರಾಗಲೀ, ನಟಿಸುವವರಾಗಲೀ ಪರಿಚಯ ಪಡೆದಿದ್ದ ರಂಗದ್ರವ್ಯಗಳೆಲ್ಲವೂ ಪಾಶ್ಚ್ಯಾತ್ಯದಿಂದ, ಪಾರ್ಸಿ ರಂಗಭೂಮಿಯ ಮೂಲಕ ಬಂತೆಂದು ವಾಸ್ತವವಾದ ಅತಿವಾದವನ್ನು ಹೂಡುವುದು ಉಪಯುಕ್ತವಲ್ಲವಷ್ಟೆ.

**ಹವ್ಯಾಸಿ ರಂಗಭೂಮಿ**: ಇದರಲ್ಲಿ ನಗರಗಳ ಹವ್ಯಾಸಗಳ ರಂಗಭೂಮಿಯಂತೆ ಹಳ್ಳಿಯ ಹವ್ಯಾಸಗಳ ರಂಗಭೂಮಿಯೂ ಬಂದಿದೆ. ಹಳ್ಳಿಯ ಹವ್ಯಾಸಿಗಳು ವರ್ಷಕ್ಕೊಮ್ಮೆ ಒಂದು ನಾಟಕವನ್ನು ಕಲಿತು ಆಡುವದುಂಟೆಷ್ಟೆ. ವೃತ್ತಿ ರಂಗಭೂಮಿಯಲ್ಲಿ ಪ್ರಚಾರದಲ್ಲಿರುವ ಪ್ರತಿಯೊಂದನ್ನೂ ಕಲಿಸುವುದು ವಾಡಿಕೆ. ಇಲ್ಲಿಯೂ ಕಲಿಸುವವನಿಗೆ ಅವನಿಗೆ ದೊರಕಿರುವ ನಟರ ಹಿನ್ನೆಲೆಯಲ್ಲಿ ಪ್ರಯೋಗವನ್ನು ತಾನೇ ನಿರ್ಮಿಸುವ ಅವಕಾಶವಿರುತ್ತದೆ. ಈ ಪ್ರಯೋಗಗಳಂತೂ ನಟನೆಯ ದೃಷ್ಟಿಯಿಂದ ಬಯಲಾಟದ ನೆರವನ್ನು ಪಡೆಯುತ್ತವೆ. ಇದೂ ಅಲ್ಲದೆ ಆಯ್ದ ನಾಟಕದ ಪಾತ್ರಗಳ ಹಂಚಿಕೆ, ನಾಟಕ ಪ್ರಯೋಗದ ವರೆಗೆ ಭಾಗಿಯಾಗಿರುವ ಅವರ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಮುಖ್ಯವಾಗುತ್ತವೆ. ನನಗೆ ಇದು ತುಂಬಾ ಮುಖ್ಯ ಸಂಗತಿ ಎನಿಸಿದೆ. ಪುರಾಣದ ಪಾತ್ರ ಘಟನೆಗಳೇ ಊರಿನ ಜನರ ನಡುವಣ ಸಂಬಂಧದಲ್ಲಿ ಪುನರ್ ವ್ಯಾಖ್ಯಾನಗೊಂಡು ಜೀವಂತ ಪ್ರಕ್ರಿಯೆಗೆ ಒಳಗಾಗುವುದು ನಮ್ಮ ಜನಪದ ನವೀನ ಸೃಜನಶೀಲತೆಯ ದಿಕ್ಕುಗಳನ್ನು ತೋರಿಸಬಲ್ಲದು. ಈ ಮಾತನ್ನು ಸಮರ್ಥಿಸಲು ಇಲ್ಲಿ ಹೆಚ್ಚು ಅವಕಾಶವಿಲ್ಲ. ರಾಜನ ಪಾತ್ರ, ಕೃಷ್ಣನ ಪಾತ್ರ, ಅರ್ಜುನನ ಪಾತ್ರ, ರಾಮನ ಪಾತ್ರ,ವಹಿಸುವವರು ಮತ್ತು ಅವರ ಮೂಲಕ ಚರ್ಚೆ ಅವಶ್ಯವೆನಿಸುತ್ತದೆ.

ಈ ಮೊದಲು ಹೇಳಿದ ಆಧುನಿಕ ರಂಗಭೂಮಿಯ ಲಕ್ಷಣಗಳೇನಾದರೂ ಪೂರ್ಣ ಪ್ರಮಾಣದಲ್ಲಿ ಅನ್ವಯಿಸುವದಿದ್ದರೆ ಅದು ನಗರಗಳಲ್ಲಿ ರೂಪಗೊಂಡ ಹವ್ಯಾಸಿ ರಂಗಭೂಮಿಗ□ ಎನ್ನಬೇಕು. ಈ ರಂಗಭೂಮಿ ಲಿಖಿತ ನಾಟಕಗಳ ದೃಶ್ಯ ರೂಪವನ್ನು ರೂಪಿಸಲು ಯತ್ನಿಸಿದವು. ಪ್ರಯೋಗದ ನಿರ್ಮಾತೃವೊಬ್ಬ ಈಗ ಸೃಷ್ಟಿಯಾಗುತ್ತಾನೆ. ನಿರ್ದೇಶಕ ಲಿಖಿತ ನಾಟಕದಲ್ಲಿ ದೊರಕುವ ದ್ರವ್ಯದೊಡನೆ ವಿಶಿಷ್ಟವೆನ್ನಲಾಗುವ ಪ್ರಯೋಗವನ್ನು ರೂಪಿಸುವುದುಂಟು. ಆದರೆ ನಮ್ಮ ಹವ್ಯಾಸಿರಂಗದ ನಾಟಕಕಾರರು ಮತ್ತು ನಿರ್ದೇಶಕರು ಮೊದಮೊದಲಂತೂ ವೃತ್ತಿರಂಗವನ್ನು, ಜನಪದ ರಂಗವನ್ನು ಗೇಲಿ ಮಾಡಿಯೇ ಹೊರಟವರು. ಶಿಕ್ಷಣ ಮತ್ತು ಇತರ ದೇಶಗಳ ರಂಗಭೂಮಿಗಳ ಪರಿಚಯ ಹೊಸ ಬಗೆಗಾಗಿ ಹುಡುಕಾಟ ನಡೆಸುವಂತೆ ಮಾಡಿತು. ನಟನ ವಾಚಕಾಭಿನಯವೆಷ್ಟು ಶಿಸ್ತಿಗೆ ಒಳಪಡುತ್ತಿತ್ತೊ ಅಷ್ಟೇ ಅವನ ಆಂಗೀಕ ಅಭಿನಯವೂ ಕೂಡ. ಎಲ್ಲ ಘಟಕಗಳೂ ಕೂಡ ಒಂದು ಅರ್ಥಪೂರ್ಣ ಚಿತ್ರದ ನಿರ್ಮಾಣಕ್ಕಾಗಿ ದುಡಿಯಬೇಕೆಂಬ ಸೂತ್ರ ಇಲ್ಲಿ ಮುಖ್ಯ. ನಟರ ಪರಸ್ಪರ ಚಲನವಲನಗಳ ಏರಿಳಿತ, ಮೌನ, ಬೆಳಕಿನ ವ್ಯವಸ್ಥೆ ಹಿನ್ನೆಲೆಯ ಸಂಗೀತ ಇವು ರಂಗ ಪರಿಕರಿಗಳ ಜೊತೆ ನಿಯೋಗಾತ್ಮಕವಾದವು. ಇವೆಲ್ಲವೂ ಸಂಪೂರ್ಣವಾಗಿ ಹೊಸದು.

ನಟರು ಆಡುವ ಮಾತುಗಳು ಪಾತ್ರಗಳೇ ಆಡುವ ಮಾತುಗಳಾಗದೆ, ಪಾತ್ರಗಳ ಮೂಲಕ ನಾಟಕಕಾರ ಕಾಣಿಸುತ್ತಿರುವುದನ್ನ ಸೂಚಿಸುತ್ತವೆ. ಎಂದರೆ ನಾಟರು ಪಾತ್ರಗಳು ಪಾರದರ್ಶಕ ವಸ್ತುಗಳಾದರೂ. ಅಂತಹ ಒಂದು ಉದಾಹರಣೆ ನೋಡಿ 'ಒಂದು ಕಡೆ' ನೆಲದಲ್ಲಿ ಬೇರು ಬಿಡುವ ಮುನ್ನ ಆಕಾಶದಲ್ಲಿ ಟೊಂಗೆ ಬಿಟ್ಟವನು ತಾನೆಂದು ತನ್ನನ್ನು ವರ್ಣಿಸಿಕೊಳ್ಳುತ್ತಾನೆ. ಜಾತಿ ನಾಟಕದಲ್ಲಿ ಯಾತಿಯೂ ಕೂಡ ಹೇಳುವ ಒಂದು ಮಾತು ಹೀಗಿದೆ. ಬೆಳಕ್ಕಿಲ್ಲದ ದಾರಿಯಲ್ಲಿ ಹೋಗಬಹುದು ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಾನು ಹೋಗಲಾರೆ. ಈ ಮಾತುಗಳು ಪಾತ್ರಗಳ ಮೂಲಕ ನಾಟಕಕಾರರು ಹೇಳುತ್ತಿರುವಂತಿದೆ ಎಂದರೇನಾಯ್ತು ನಟ ಈ ಮಾತುಗಳನ್ನ ಆಡಿ

ತೋರಿಸಿದಾಗ ಆತನ ಗುರಿ ಮತ್ತು ನೋಡುವವನ ಗುರಿ ಭಾಷಾ ಆಕೃತಿಯನ್ನು ಗ್ರಹಿಸುವುದೇ ಆಗಿರುತ್ತದೆ. ಇದು ಪಾರಂಪರಿಕ ರಂಗಭೂಮಿಗೆ ತೀರ ಅಪರಿಚಿವಾದುದ್ದು.

**ಪ್ರೇಕ್ಷಕನ ಸಮಸ್ಯೆ:** ಬಯಲಾಟದ ಪ್ರೇಕ್ಷಕನಿಗೆ ನಡೆಯುವ ಕಥೆ ಹೊಸದೇ ಆಗಿರುವುದಿಲ್ಲ. ಆದರೆ ಪ್ರಯೋಗದ ಮೂಲಕ ಮತ್ತೆ ತನ್ನ ಅಭಿರುಚಿಗೆ ತಕ್ಕಂತೆ ಪುನಾರೂಪಿಸಿಕೊಳ್ಳುತ್ತಾನೆ. ಆತ ತನ್ನ ಅನುಭವವನ್ನು ನವೀಕರಿಸಿಕೊಳ್ಳುವ ಈ ಪ್ರಕ್ರಿಯೆಯಲ್ಲಿ ಆಯ್ಕೆಯ ಅವಕಾಶವನ್ನು ಉಳಿಸಿಕೊಂಡಿರುತ್ತಾನೆ. ಅಂದರೆ ಮಾತಾಡುವ ನಿದ್ದೆ ಮಾಡುವ, ಹರಟೆ ಹೊಡೆಯುವ. ಎದ್ದು ಹೋಗುವ, ಮತ್ತೆ ಬರುವ ಅವಕಾಶವೆಲ್ಲ ಇದ್ದೇ ಇರುತ್ತದೆ. ಆಧುನಿಕ ರಂಗಭೂಮಿಯಲ್ಲಿ ಈ ಜನಪದ ರಂಗದ ಪ್ರೇಕ್ಷಕನ ಸ್ವರೂಪ ಕೊಂಚ ಬೇರೆ. ವೃತ್ತಿ ನಾಟಕಗಳ ಪ್ರೇಕ್ಷಕನಿಗೆ ಮೇಲೆ ಹೇಳಿದ ಅವಕಾಶಗಳು ಇದ್ದೇ ಇರುತ್ತವೆ. ಆದರೆ ಪ್ರಮಾಣ ಕೊಂಚ ಕಡಮೆ. ಇಲ್ಲಿಯೂ ಆತ ತನ್ನೊಳಗಿನ ಜನಪದ ನಾಯಕರುಗಳನ್ನು ಕಾಣುತ್ತಿರುತ್ತಾನೆ. ನಮ್ಮ ವೃತ್ತಿ ರಂಗಭೂಮಿಯ ಮಹಾನ್ ನಟರುಗಳು ಕರ್ನಾಟಕದ ಜನಪದ ಸೃಷ್ಟಿಸಿದ ನಾಯಕರುಗಳು:ಸೃಜನಶೀಲ ಜನಪದದ ರೂಪಿಸಿದ ಆಕೃತಿಗಳು. ಇವೆಲ್ಲದರ ಜೊತೆಗೆ ಊರಿಗೆ, ಊರಿನ ಸುತ್ತಮುತ್ತಲಿನ ಹೆಸರಾದ, ಒಂದೊಂದು ಪಾತ್ರದೊಡನೆ ಗುರುತಿಸಲಾಗುವ ಜನಪದ ನಾಯಕರುಗಳು ಇರುತ್ತಾರೆ. ಎಂದರೆ ಪ್ರೇಕ್ಷಕರಿಗೆ ಜನಪದ ರಂಗಭೂಮಿಯಲ್ಲಿ ಹಾಗೂ ವೃತ್ತಿರಂಗಭೂಮಿ ಮತ್ತು ಹಳ್ಳಿಯ ಹವ್ಯಾಸಿ ರಂಗಭೂಮಿಯಲ್ಲಿ ದೊರಕುವ ಅನುಭವ ಪ್ರಮಾಣದಲ್ಲಿ ವ್ಯತ್ಯಾಸ ಇರಬಹುದೇ ಹೊರತು, ಗುಣಾತ್ಮಕ ವ್ಯತ್ಯಾಸವನ್ನು ಪಡೆದಿರುವುದಿಲ್ಲ.

ಆದರೆ ಇದೇ ಮಾತನ್ನು ಕಲಿತ ಪ್ರೇಕ್ಷಕರನ್ನು ಗಮನಿಸಿ ಹೇಳಲು ಸಾಧ್ಯವಿಲ್ಲ. ಓದಿದವರು ಜನಪದ ಪ್ರೇಕ್ಷಕರಂತೆ ಉಳಿಯಲಾರರು. ಇದಕ್ಕೆ ಕಾರಣ ಅವರ ಅಭಿರುಚಿ ಪರಿಕೃತವಾಗಿರುವುದು ಸಾಮಾನ್ಯವಾದ ತಿಳುವಳಿಕೆ. ಇಲ್ಲಿ ಪರಿಷ್ಕೃತವಾಗಿರುವುದು ಎಂಬ ಮಾತಿನ ಅರ್ಥ ವ್ಯಾಪ್ತಿಯ ಮೇಲೆ ಈ ತಿಳಿವಳಿಕೆ ಸತ್ಯಾಸತ್ಯ ನಿರ್ಧಾರವಾಗಬೇಕು. ಆದರೆ ನೋಡುವವರು ಕಲಿತ ಕೆಲವು ವಿಚಾರಗಳು, ಪಡೆದ ಅನುಭವಗಳು ಅವರನ್ನು ಪ್ರೇಕ್ಷಕ ಸಮೂಹದಲ್ಲಿ ಒಬ್ಬಂಟಿಯನ್ನಾಗಿ ಮಾಡುತ್ತವೆ. ಇದು ನಮ್ಮ ಸಮಾಜದ ಒಂದು ಲಕ್ಷಣವೇ ಆಗುವುದರಿಂದ ಇಲ್ಲಿ ಅದನ್ನು ಪ್ರತ್ಯಕ್ಷವಾಗಿ ಚರ್ಚಿಸಬೇಕಿಲ್ಲವೆಂದು ತೋರುತ್ತದೆ.

ನಗರ ಹವ್ಯಾಸಿ ರಂಗಭೂಮಿಯ ಪ್ರೇಕ್ಷಕರ ಅನುಭವವೇ ಬೇರೆ. ನಿರ್ದೇಶಕ ಕೇವಲ ಪ್ರಯೋಗದ ಲಕ್ಷಣವನ್ನು ಮಾತ್ರವಲ್ಲ. ಪ್ರೇಕ್ಷಕರ ಪ್ರತಿಕ್ರಿಯೆಯನ್ನು ನಿರ್ದೇಶಿಸುತ್ತಾರೆ. ಉತ್ತಮ ಪ್ರಯೋಗದಲ್ಲಿ ಪ್ರೇಕ್ಷಕವನ್ನೂ ಆದಷ್ಟು ಕಟ್ಟಿಡುವುದರಲ್ಲಿ ಯಶಸ್ಸನ್ನು ಪಡೆಯಬೇಕಾಗುತ್ತದೆ.

ಹವ್ಯಾಸಿ ನಾಟಕ ಪ್ರಯೋಗಗಳ ಹಳ್ಳಿಯು ಪ್ರೇಕ್ಷಕರ ಎದುರಿಗೆ ತಾವೇ ಏಕಾಂಗಿತನದ ಅನುಭವಗಳನ್ನು ಪಡೆಯುತ್ತವೆ. ಕೇವಲ ವಾಚಿಕಾಭಿನಯದಲ್ಲಿ ಮತ್ತು ಅತಿ ಸೂಕ್ಷ್ಮವಾದ ಅಂಗೀಕ ಅಭಿನಯದಲ್ಲಿ ಪ್ರೇಕ್ಷಕರನ್ನ ಅಲ್ಲಿ ಹಿಡಿದಿಟ್ಟುಕೊಳ್ಳುವುದು ಅಸಾಧ್ಯವೇ ಸರಿ. ಈ ಅಂಶ ನಮ್ಮ ಹವ್ಯಾಸ ರಂಗಭೂಮಿಯಲ್ಲಿ ಒಂದು ಪರಿವರ್ತನೆಗೆ ಕಾರಣವಾಗಿದೆ. ಜೊತೆಗೆ ಪ್ರಯೋಗಗಳು ನಟರಿಗೆ ಒದಗಿಸುವ ಇಕ್ಕಟ್ಟು ಅಸಹನೀಯವೂ ಆಗುವುದರಿಂದ ಹವ್ಯಾಸಗಳು ನಿಧಾನವಾಗಿ ಬದಲಾಗುತ್ತಾರೆ. ಈ ಬದಲಾವಣೆ "ಅತಿ-ಹವ್ಯಾಸಿ' ಮತ್ತು ಜನಪದ ರಂಗಭೂಮಿ ಕಾರಣವಾಗಿದೆ. ಇವೆರಡೂ ಒಂದೇ ಬಗೆಯ ರಂಗಭೂಮಿಯಲ್ಲ.ಅರೆಹವ್ಯಾಸಿ ಪ್ರಯೋಗಗಳ ಮುಕ್ತತೆಯನ್ನು ಬಯಸುವವರು, ಬಂಧವನ್ನೂ ಸಡಿಲವಾಗಿಡಬಯಸುವವರು.ಪ್ರೇಕ್ಷಕ ವರ್ಗವನ್ನು ಹೆಚ್ಚಿಸಿಕೊಳ್ಳ ಬಯಸುವವರು.ಜನಪದ ರಂಗಭೂಮಿಯನ್ನು ಒಂದು ಸಾಧನವನ್ನಾಗಿ ಮಾಡಲು ಬಯಸುತ್ತಾರೆ. ನಾನು ಈ ಮಾತನ್ನ ತೀರ ಸರಳಗೊಳಿಸಲು ಪ್ರಯತ್ನಿಸಿ ಹೇಳಿದಲ್ಲ.

ಎಂದರೆ ಪ್ರೇಕ್ಷಕರನ್ನ ಸೃಷ್ಟಿಸಲು, ವಿಸ್ತರಿಸಲು ಬದಲಾದ ರಂಗಪದ್ಧತಿಯನ್ನು ರೂಪಿಸುವ ಯತ್ನವನ್ನು ಮಾಡಲು ತೊಡಗಿವೆ. ಗಮನಿಸಬೇಕಾದ ಅಂಶವೆಂದರೆ ಇವೆರಡು ಪ್ರಯತ್ನಗಳು ಕಳೆದ ಹತ್ತು ವರ್ಷಗಳ ಕನ್ನಡ ರಂಗಭೂಮಿಯಲ್ಲಿ ನಡೆಯುತ್ತ ಬಂದಿವೆ. ಮತ್ತು ಎರಡೂ ಪ್ರಯತ್ನಗಳು ಬಂದಿಲ್ಲೊಂದು ಬಗೆಯಲ್ಲಿ ಜನಪದಯನ್ನು ಎಚ್ಚರದಿಂದ ಬಳಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿವೆ. ಇದು ಹಲವು ಮುಖಗಳನ್ನು ಪಡೆದಿದೆ ಎನ್ನಬಹುದು

1 ಪಿ ಲಂಕೇಶರ 'ತೆರೆಗಳು' ಎಂಬ ನಾಟಕವನ್ನು ಸುಮಾರು *10* ವರ್ಷಗಳ ಹಿಂದೆ ಬಯಲಾಟದ ರೂಪಕ್ಕೆ ಪರಿವರ್ತಿಸಿ ಅಭಿನಯಿಸಿ ತೋರಿಸುವ ಒಂದು ಪ್ರಯತ್ನ ನಡೆಯಿತು. ಎಂದರೆ ಲಿಖಿತ ನಾಟಕ ವೊಂದರ

ಪ್ರಯೋಗಕ್ಕೆ ಜನಪದ ಪರಿಕರಗಳನ್ನು ಬಳಸುವ ಯತ್ನ ನಡೆಯಿತ□· ಹಾಡು· ಕುಣಿತಗಳು ಅಲ್ಲಿ ಪ್ರವೇಶಿಸಿದವು· ಹಾಡುಗಳು ಮತ್ತು ವ್ಯಕ್ತಿಯನ್ನು ವಿಟ್ಟಿ,ಕಂಠಿ ಕಿಟ್ಟಿ ಈ ಮೂವರು ಹಿಂಸಿಸುತ್ತ ನಡೆಸುವುದು ಸಂಗ್ಯಾಬಾಳ್ಯಾ ಬಯಲಾಟದಿಂದ ಪ್ರೇರಣೆಯನ್ನು ಪಡೆದಿತ್ತು· ಇಲ್ಲಿಂದ ಮುಂದೆ ಲಿಖಿತ ನಾಟಕಗಳನ್ನು ಬಯಲಾಟದ ತಂತ್ರದಲ್ಲಿ ತೋರಿಸುವ ಹಾಡುಗಳು ಮುಂದುವರೆದಿದೆ·

2· ಇದಲ್ಲದೆ ನಾಟಕಕಾರಾನೇ ತನ್ನ ವಾಚಿಕವನ್ನು ಬಯಲಾಟದ ತಂತ್ರಗಳನ್ನ ಬಳಸಿ ರಚಿಸುವ ಪ್ರಯತ್ನಗಳು ನಡೆದಿವೆ· ಬಯಲಾಟದ ಶೈಲಿಕೃತ ರಂಗ ಪದ್ಧತಿಗಳನ್ನು ಪ್ರೇಕ್ಷಕನಿಗಾಗಿ ಸಾಂಕೇತಿಕ ಅರ್ಥದೊಡನೆ ಬಳಸುವ ಜೋಕುಮಾರ ಸ್ವಾಮಿ, ಋಷಿಶೃಂಗ, ಹಯವದನ ಮೊದಲಾದ ನಾಟಕಗಳು ಮೊದಲು ರಚನೆಯಾದವು· ಇಲ್ಲಿ ಜನಪದ ರಂಗಭೂಮಿಯ ಉದ್ದೇಶ ಹಾಗೆ ಉಳಿಯುವುದಿಲ್ಲ·ಪ್ರೇಕ್ಷಕನ ಅನುಭವವನ್ನು ವಿಸ್ತರಿಸುವ ಅಂಶವಾಗಿಬಿಡುತ್ತದೆ· ಆದ್ದರಿಂದ ಜನಪದ ರಂಗಭೂಮಿ ಆಧುನಿಕ ರಂಗಭೂಮಿಗೆ ದ್ರವ್ಯವನ್ನು ಒದಗಿಸುತ್ತದೆ ಎನ್ನುವುದೇ ಹೊರತು ತನ್ನ ಸಾಧ್ಯತೆಯನ್ನು ಅನ್ವಯಿಸುತ್ತದೆ ಎನ್ನುವಂತಿಲ್ಲ ಈ ಬಗ್ಗೆಯೂ ಸಾಕಷ್ಟು ಚರ್ಚೆ ಸಾಧ್ಯವಿದೆ·

ಕಂಬಾರರೇ ಒಂದು ಕಡೆ ಬಯಲಾಟ ಇನ್ನು ಮುಂದೆ ಉಳಿಯುವುದಾದರೆ ನಗರ ಪ್ರೇಕ್ಷಕರಿಂದ ಎಂದಿದ್ದಾರೆ· ಅವರು ತಾವು ಬಯಲಾಟದ ತಂತ್ರಗಳನ್ನ ಮತ್ತು ನಾಟಕಗಳನ್ನ ಬಳಸುವ ಉದ್ದೇಶಗಳ ಹಿನ್ನೆಲೆಯಲ್ಲಿ ಈ ಮಾತು ಹೇಳಿದರು· ಜನಪದ ರಂಗಭೂಮಿ ಪ್ರಕಾರಗಳ ಅನುಸಂಧಾನದ ಮೂಲಕ ಸ್ಪಷ್ಟ ಲಂಗ ಕಲ್ಪನೆಯನ್ನು ರೂಢಿಸಬೇಕೆಂದು ಶ್ರೀ ಸುಬ್ಬಣ್ಣ ಕೂಡ ಹೇಳಿದ್ದಾರೆ·

ನಾಟಕಕಾರರು ಮತ್ತು ಪ್ರಯೋಗಕಾರರು ಈ ಮಾತುಗಳನ್ನು ಹೇಳಿರುವುದು ಗಮನಾರ್ಹ· ಆಧುನಿಕ ರಂಗಭೂಮಿಯ ವಿಸ್ತರಣೆಗೆ ಮತ್ತು ಜೀವಂತಿಕೆಗೆ ನಡೆಯಬೇಕಾದ ಪ್ರಯತ್ನಗಳೇ ಅವರ ಗಮನದಲ್ಲಿದೆ ಎಂಬುದು ನಿಶ್ಚಯ· ಇದಲ್ಲದೆ ಮತ್ತೆ ಬಳಸುವ ನಡೆದಿದೆ

೧· ಸಮೂಹ ಮಾಧ್ಯಮವನ್ನಾಗಿ ಬಳಸುವುದು

೨· ರಕ್ಷಿಸುವುದು

· ಸಮೂಹ ಮಾಧ್ಯಮವನ್ನಾಗಿ ಜನಪದ ರಂಗಭೂಮಿಯನ್ನು ಬಳಸುತ್ತಿರುವ ಬಗೆಗೆ ಪ್ರತ್ಯೇಕ ಸಂಬಂಧವೇ ಮಂಡಿತವಾಗಿರುವುದರಿಂದ ನಾನಿಲ್ಲಿ ಅದನ್ನು ಚರ್ಚಿಸುವುದಿಲ್ಲ·

ಈಗೀಗ ಜನಪದಗಳಲ್ಲಿ ಭಾಷೆ ತಿಳಿಯದ ರಾಜ್ಯಗಳಲ್ಲಿ ಪ್ರದರ್ಶನ ಏರ್ಪಡಿಸಲಾಗುತ್ತಿದೆ· ಜನಪದ ರಂಗಕ್ಕೂ, ಜನಪದ ರಂಗದ ನಿಜವಾದ ಪ್ರೇಕ್ಷಕನಿಗೂ ನಡುವೆ ಕೊಂಡಿ ಕಳಚುತ್ತಿದೆ· ಮನೋವೃತ್ತಿಯ ನಗರದವರ ಮುಂದೆ ಬಯಲಾಟಗಳನ್ನ ಇಡುತ್ತಿರುವುದು ನಮ್ಮ ವಿದ್ಯಾವಂತರ ಎತ್ತಿ ಹೇಳುತ್ತದೆ· ಇದು ಬಯಲಾಟವನ್ನು ಜೀವಂತಿಕೆ ಕಳೆದುಕೊಂಡ ಪ್ರೇಕ್ಷಕರನ್ನ ಕಳೆದುಕೊಂಡ ರಂಗ ಪ್ರಚಾರವೆಂದು ಭಾವಿಸಿದ್ದರೂ ಎಷ್ಟು ಸರಿ ಎಂಬುದು ಆಲೋಚಿಸಬೇಕಾದ ವಿಷಯವಾಗಿದೆ·

ಗ್ರಂಥಋಣ


1. ಆದ್ಯ ರಂಗಚಾರ್ಯ ಭಾರತೀಯರ ರಂಗಭೂಮಿ
2. ಕುರ್ತಕೋಟಿ ಕೇಡಿ ಯುಗಧರ್ಮ ಮತ್ತು ಸಾಹಿತ್ಯ
3. ಚಂದ್ರಶೇಖರ ಕಂಬಾರ ಜನಪದ ನಾಟಕ ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ
4. ಸುಬ್ಬಣ್ಣ ಕೆವಿ ಜನ ಜಾನಪದ ಸಾಹಿತ್ಯ ದರ್ಶನ ಅಧ್ಯಕ್ಷರ ಭಾಷಣ ಗೋಷ್ಠಿ